# 'Corporate firms must dole out CSR funds for state varsities'

DHARWAD, DHNS

Industries, corporate companies, and organisations should join hands to support the academic activities of universities, said Karnatak University In-charge Vice-Chancellor Jayashree S.

She was speaking after signing an MoU with M R Gorbal Foundation in the Syndicate Hall of Karnatak University. The event marked a collaboration between the Department of Chemistry, Karnatak University, and the M R Gorbal Foundation, Bengaluru, to support students' academic activities.

She emphasised that providing fellowships for students' research activities is essential, and in this regard, corporate organisations, industries, and institutions should extend their support to universities.

Administrative Registrar A Channappa stated that private institutions should collaborate under the Corporate Social Responsibility (CSR) scheme to empower educational institutions.

M R Gorbal Foundation Chairman Ramesh Gorbal said, "My father, M R Gorbal, studied and served at this university and had a deep bond with Karnatak University. As part of contributing to the university, the Dr M R Gorbal Foundation has agreed to provide fellowships to research-oriented students, support the organisation of international lectures, and award cash prizes to outstanding research thesis presentations in the Department of Chemistry."

Dr Ravindra Kamble, D S Patil, Prof R B Chougale, Prof L A Shastri, Prof Sujata, and R F Bhajantri were present.



**KU In-charge Vice-Chancellor Jayashree S exchanges academic MoU with M R Gorbal Foundation in Dharwad.** DH PHOTO

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಸಂಶೋಧನೆಗೆ ಕವಿವಿ-ಗೋರಬಾಳ್ ಪ್ರತಿಷ್ಠಾನ ಒಪ್ಪಂದ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಜತೆಗೆ ಖಾಸಗಿ ಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ-ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಶ್ರೀ. ಎಸ್ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಶನಿವಾರ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕವಿವಿ ರಸಾಯನಶಾಸ್ತ್ರ ವಿಭಾಗ ಹಾಗೂ ಬೆಂಗಳೂರಿನ ಡಾ. ಎಂ.ಆರ್. ಗೋರಬಾಳ್ ಪ್ರತಿಷ್ಠಾನ ಜತೆಗೆ ಒಪ್ಪಂದ ಮಾಡಿಕೊಂಡು ಬಳಿಕ ಅವರು ಮಾತನಾಡಿದರು.

ಕವಿವಿ ಕುಲಸಚಿವ ಡಾ. ಎ. ಚನ್ನಪ್ಪ ಮಾತನಾಡಿ, ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಯಡಿ ಉದ್ಯಮಿಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿವಿಗಳು ಕೈ ಜೋಡಿಸಬೇಕು ಎಂದರು.




ಧಾರವಾಡ ಕರ್ನಾಟಕ ವಿಶ್ವ ವಿದ್ಯಾಲಯ ಹಾಗೂ ಬೆಂಗಳೂರಿನ ಡಾ.ಎಂ.ಆರ್. ಗೋರಬಾಳ್ ಪ್ರತಿಷ್ಠಾನ ಸಂಶೋಧನಾ ಚಟುವಟಿಕೆ ಉತ್ತೇಜಿಸಲು ಒಪ್ಪಂದ ಮಾಡಿಕೊಂಡವು. ಪ್ರೊ. ಜಯಶ್ರೀ ಎಸ್., ಡಾ. ಎ. ಚನ್ನಪ್ಪ, ರಮೇಶ ಗೋರಬಾಳ್, ಡಾ. ರವೀಂದ್ರ ಕಾಂಬಳೆ, ಡಿ.ಎಸ್. ಪಾಟೀಲ, ಇತರರು ಇದ್ದರು.

ಪ್ರತಿಷ್ಠಾನದ ಅಧ್ಯಕ್ಷ ರಮೇಶ ಗೋರಬಾಳ ಮಾತನಾಡಿ, ನನ್ನ ತಂದೆ ಎಂ.ಆರ್.ಗೋರಬಾಳ ಈ ವಿವಿಯಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ್ದಾರೆ. ಹೀಗಾಗಿ ವಿವಿಗೆ ಕೊಡುಗೆ ನೀಡುವ ಉದ್ದೇಶದಿಂದ ಪ್ರತಿಷ್ಠಾನ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು, ಅಂತಾರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಸಹಾಯಧನ, ರಸಾಯನಶಾಸ್ತ್ರ ವಿಭಾಗದ ಉತ್ತಮ ಸಂಶೋಧನಾ ಪ್ರೌಢ ಪ್ರಬಂಧಕ್ಕೆ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿ ನೀಡುವುದೇ ಒಪ್ಪಂದದ ಉದ್ದೇಶ ಎಂದರು.

ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ರವೀಂದ್ರ ಕಾಂಬಳೆ, ಪ್ರತಿಷ್ಠಾನದ ಕಾರ್ಯದರ್ಶಿ ಡಿ.ಎಸ್. ಪಾಟೀಲ, ಪ್ರಾಧ್ಯಾಪಕರಾದ ಪ್ರೊ.ಆರ್.ಬಿ. ಚೌಗಲೆ, ಪ್ರೊ. ಎಲ್.ಎ. ಶಾಸ್ತ್ರಿ, ಪ್ರೊ. ಸುಜಾತ, ಡಾ.ಆರ್.ಎಫ್. ಭಜಂತ್ರಿ, ಇತರರು ಇದ್ದರು.

Hubli Edition
Apr 27, 2025 Page No. 11
Powered by: erelego.com

ಕನ್ನಡಪ್ರಭ

**ಒಡಂಬಡಿಕೆ** | ವಿವಿಯೊಂದಿಗೆ ಡಾ. ಎಂ.ಆರ್. ಗೋರಬಾಳ್ ಫೌಂಡೇಶನ್ ಒಡಂಬಡಿಕೆ

# ವಿವಿಗಳ ಜತೆ ಕಾರ್ಪೊರೇಟ್ ಕಂಪನಿಗಳು ಕೈ ಜೋಡಿಸಲಿ

• **ಕನ್ನಡಪ್ರಭ ವಾರ್ತೆ** ಧಾರವಾಡ

ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳಜತೆಗೆಖಾಸಗಿಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವ ತುರ್ತು ಅಗತ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಶ್ರೀ. ಎಸ್ ಅಭಿಪ್ರಾಯಪಟ್ಟರು.

ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕವಿವಿ ರಸಾಯನಶಾಸ್ತ್ರವಿಭಾಗ ಮತ್ತು ಬೆಂಗಳೂರಿನ ಡಾ. ಎಂ.ಆರ್. ಗೋರಬಾಳ್ ಫೌಂಡೇಶನ್ ಜತೆಗೆ ಒಪ್ಪಂದ (MoU) ಮಾಡಿಕೊಂಡು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚುಮಹತ್ವಪಡೆದಿದೆ ಎಂದ ಅವರು ಪ್ರಸ್ತುತ ಕಾರ್ಪೊರೇಟ್ ಸಂಸ್ಥೆ, ಉದ್ಯಮ ಮತ್ತು ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜತೆಗೆ ಸಹಾಯ ಸಹಕಾರ ಇಂದಿನ ಅಗತ್ಯವಾಗಿದ್ದು, ಸಂಘ ಸಂಸ್ಥೆಗಳು, ಉದ್ಯಮಿಗಳು, ಮತ್ತು ಸಂಘ ಸಂಸ್ಥೆಗಳು ಸಮಾಜಕ್ಕೆ ಏನಾದರೂ ಕೊಡುಗೆನೀಡಬೇಕು ಎಂಬ ಉದ್ದೇಶ ಹೊಂದಿದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ ಎಂದರು.




KP

ಕವಿವಿ ರಸಾಯನಶಾಸ್ತ್ರ ವಿಭಾಗ ಮತ್ತು ಡಾ. ಎಂ.ಆರ್. ಗೋರಬಾಳ್ ಫೌಂಡೇಶನ್ ಜತೆಗೆ ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸಲು ಒಪ್ಪಂದ ಮಾಡಿಕೊಳ್ಳಲಾಯಿತು.

- ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ
- ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜತೆಗೆ ಸಹಾಯ ಸಹಕಾರ ಇಂದಿನ ಅಗತ್ಯವಾಗಿದೆ

ಕವಿವಿ ಕುಲಸಚಿವ ಡಾ. ಎ. ಚೆನ್ನಪ್ಪ ಮಾತನಾಡಿ, ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಸಂಘ ಸಂಸ್ಥೆಗಳು ಮುಂದೆ ಬರಬೇಕಾದ ಅವಶ್ಯಕತೆಇದೆ. ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಎಂಬ ಯೋಜನೆ ಅಡಿಯಲ್ಲಿ ಉದ್ಯಮಿಗಳು. ಕಾರ್ಪೊರೇಟ್‌ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಜೊತೆಗೆ ಕೈ ಜೋಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ಅಧ್ಯಕ್ಷ ರಮೇಶ್ ಗೋರಬಾಳ ಮಾತನಾಡಿ, ನನ್ನ ತಂದೆ ಎಂ. ಆರ್. ಗೋರಬಾಳ ಇದೇ ವಿಶ್ವವಿದ್ಯಾಲಯದಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ್ದಾರೆ. ಕವಿವಿಗೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದಿಂದ ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡುವುದು, ಅಂತಾರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಧನಸಹಾಯ ಒದಗಿಸುವುದು. ಉತ್ತಮ ಸಂಶೋಧನಾ ಪ್ರೌಢಪ್ರಬಂಧಮಂಡಿಸಿದರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿಯನ್ನು ನೀಡಲಾಗುವುದು ಎಂದರು ಅಲ್ಲದೇ, ಈ ಸಂಬಂಧ ಒಪ್ಪಂದ ಮಾಡಿಕೊಂಡರು.

ಕವಿವಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ರವೀಂದ್ರ ಕಾಂಬಳೆ, ಫೌಂಡೇಷನ್ ಅಧ್ಯಕ್ಷ ರಮೇಶ್ ಗೋರಬಾಳ, ಕಾರ್ಯದರ್ಶಿ ಡಿ.ಎಸ್. ಪಾಟೀಲ, ಪ್ರಾಧ್ಯಾಪಕ ಪ್ರೊ. ಆರ್.ಬಿ. ಚೌಗಲೆ, ಪ್ರೊ. ಎಲ್.ಎ. ಶಾಸ್ತ್ರಿ, ಪ್ರೊ. ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕ ಡಾ. ಆರ್.ಎಫ್. ಭಜಂತ್ರಿ ಇದ್ದರು.

HUBBALLI Edition
Apr 27, 2025 Page No. 02
Powered by: erelego.com

# ವಿಶ್ವವಿದ್ಯಾಲಯಗಳ ಜತೆ ಕೈ ಜೋಡಿಸಿ: ಜಯಶ್ರೀ ಒತ್ತಿ




**ಧಾರವಾಡ:** ಇಂದು ಶೈಕ್ಷಣಿಕ ಚಟುವಟಿಕೆಗಳಿಗೆ ವಿಶ್ವವಿದ್ಯಾಲಯಗಳ ಜತೆ ಸಂಸ್ಥೆಗಳು, ಉದ್ಯಮ, ಕಾರ್ಪೊರೇಟ್ ಕಂಪನಿ ಕೈಜೋಡಿಸುವ ಅಗತ್ಯದ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ. ಜಯಶ್ರೀ ಒತ್ತಿ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಭವನದಲ್ಲಿ ಶನಿವಾರ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕ ವಿಶ್ವವಿದ್ಯಾಲಯ ಮತ್ತು ಡಾ.ಎಂ.ಆರ್.ಗೋರಬಾಳ್ ಫೌಂಡೇಶನ್ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಿ ಮಾತನಾಡಿದರು.

ವಿದ್ಯಾರ್ಥಿಗಳ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ. ಪ್ರಸ್ತುತ ಈ ನಿಟ್ಟಿನಲ್ಲಿ ಕಾರ್ಪೊರೇಟ್ ಸಂಸ್ಥೆಗಳು, ಉದ್ಯಮ ಮತ್ತು ಸಂಘ–ಸಂಸ್ಥೆಗಳು ಸಹಕಾರ ನೀಡಬೇಕಿದೆ ಎಂದರು.

ಕುಲಸಚಿವ ಡಾ.ಎ.ಚೆನ್ನಪ್ಪ, ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು ಸಮಾಜದ ಬಲವರ್ಧನೆ, ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್ಆರ್) ಎಂಬ ಯೋಜನೆಯಡಿ ಕೈಜೋಡಿಸಲು ಕರೆ ನೀಡಿದರು. ಬೆಂಗಳೂರಿನ ಡಾ.ಎಂ.ಆರ್ ಗೋರಬಾಳ ಫೌಂಡೇಶನ್ ಅಧ್ಯಕ್ಷ ರಮೇಶ್ ಗೋರಬಾಳ, ನನ್ನ ತಂದೆ ಎಂ.ಆರ್.ಗೋರಬಾಳ, ವಿಶ್ವವಿದ್ಯಾಲಯದಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ ಕುರಿತು ತಮಗೆ ಹೆಮ್ಮೆ ಇದೆ ಎಂದು ತಿಳಿಸಿದರು.

ಕಲಿತ ಮತ್ತು ಸೇವೆ ಸಲ್ಲಿಸಿದ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದಿಂದ ಡಾ.ಎಂ.ಆರ್.ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಿದೆ ಎಂದರು.

ಉತ್ತಮ ಸಂಶೋಧನಾ ಪ್ರೌಢ ಪ್ರಬಂಧ ಮಂಡಿಸಿದ ರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿ ನೀಡಲಾಗುವುದು.

ಈ ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಕಾರ್ಯಗವೇ ಈ ಒಪ್ಪಂದ ಉದ್ದೇಶ ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರವೀಂದ್ರ ಕಾಂಬಳೆ, ಪ್ರಸ್ತುತ ಸಂಶೋಧನೆಗೆ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿ ಉತ್ತೇಜನ ನೀಡಲು ಶಿಷ್ಯವೇತನ ಮತ್ತು ಶೈಕ್ಷಣಿಕ ವಲಯ ಬಲಪಡಿಸಲು ಹೇಳಿದರು. ಸಂಘ–ಸಂಸ್ಥೆಗಳು, ಉದ್ಯಮ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಹಕಾರ ಇಂದಿನ ಅಗತ್ಯವಾಗಿದೆ. ಆದ್ದರಿಂದ ಹಳೆಯ ವಿದ್ಯಾರ್ಥಿ ಸಂಘವು ವಿಶ್ವವಿದ್ಯಾಲಯದ ಜೊತೆಗೆ ಕೈಜೊಡಿಸುವ ಅವಶ್ಯಕತಯೂ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಂ.ಆರ್.ಗೊರಬಾಳ ಅಧ್ಯಕ್ಷ ರಮೇಶ್ ಗೋರಬಾಳ, ಫೌಂಡೇಶನ್ ಕಾರ್ಯದರ್ಶಿ ಡಿ.ಎಸ್ .ಪಾಟೀಲ, ಪ್ರಾಧ್ಯಾಪಕರಾದ ಪ್ರೊ. ಆರ್.ಬಿ.ಚೌಗಲೆ, ಪ್ರೊ. ಎಲ್.ಎ.ಶಾಸ್ತ್ರಿ, ಪ್ರೊ.ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕ ಡಾ.ಆರ್.ಎಫ್ ಭಜಂತ್ರಿ ಇದ್ದರು.

ಅರಕೇರಿ ಸಾರಥ್ಯ
ಕನ್ನಡ ಜನಶ್ರೀ
ಹೊಸತನದ ಹಾದಿಯಲಿ...
ದಿನಪತ್ರಿಕೆ

# ಕವಿವಿ ಜತೆ ಸಂಘ-ಸಂಸ್ಥೆ ಕೈಜೋಡಿಸಲಿ

## ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಗೋರಬಾಳ್ ಫೌಂಡೇಶನ್ ಜತೆ ಕವಿವಿ ಒಪ್ಪಂದ




ಕನ್ನಡ ಜನಶ್ರೀ ಸುದ್ದಿ ಜಾಲ

ಧಾರವಾಡ: ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಜೊತೆಗೆ ಖಾಸಗಿ ಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಸಂಘ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವ ತುರ್ತು ಅಗತ್ಯವಾಗಿದೆ ಎಂದು ಕವಿವಿ ಕುಲಪತಿ ಪ್ರೊ.ಜಯಶ್ರೀ. ಎಸ್ ಅಭಿಪ್ರಾಯಪಟ್ಟರು.

ಕವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗ ಮತ್ತು ಬೆಂಗಳೂರಿನ ಡಾ.ಎಂ.ಆರ್. ಗೋರಬಾಳ್ ಫೌಂಡೇಶನ್ ಜೊತೆಗೆ ಒಪ್ಪಂದ (**MoU**) ಮಾಡಿಕೊಂಡು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ ಎಂದ ಅವರು ಪ್ರಸ್ತುತ ಕಾರ್ಪೊರೇಟ್ ಸಂಸ್ಥೆ, ಉದ್ಯಮ ಮತ್ತು ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜೊತೆಗೆ ಸಹಾಯ ಸಹಕಾರ ಇಂದಿನ ಅಗತ್ಯವಾಗಿದ್ದು, ಸಂಘ ಸಂಸ್ಥೆಗಳು, ಉದ್ಯಮಿಗಳು, ಮತ್ತು ಸಂಘ ಸಂಸ್ಥೆಗಳು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶ ಹೊಂದಿದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ ಎಂದರು.

ಕವಿವಿ ಕುಲಸಚಿವರಾದ ಡಾ.ಎ.ಚೆನ್ನಪ್ಪ ಮಾತನಾಡಿ...ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಸಂಘ ಸಂಸ್ಥೆಗಳು ಮುಂದೆ ಬರಬೇಕಾದ ಅವಶ್ಯಕತೆ ಇದೆ. ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಎಂಬ ಯೋಜನೆ ಅಡಿಯಲ್ಲಿ ಉದ್ಯಮಿಗಳು. ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಜೊತೆಗೆ ಕೈ ಜೋಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ.ಎಂ.ಆರ್ ಗೋರಬಾಳ ಫೌಂಡೇಶನ್ ಅಧ್ಯಕ್ಷರಾದ ರಮೇಶ್ ಗೋರಬಾಳ ಮಾತನಾಡಿ ನನ್ನ ತಂದೆ ಎಂ.ಆರ್.ಗೋರಬಾಳ ಅವರು ಈ ವಿಶ್ವವಿದ್ಯಾಲಯದಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ ಅವರು ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಕಲಿತ ಮತ್ತು ಸೇವೆ ಸಲ್ಲಿಸಿದ ನನ್ನ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬುದು ಅವರ ಉದ್ದೇಶದಿಂದ ಡಾ.ಎಂ.ಆರ್. ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು, ಅಂತರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಧನಸಹಾಯ ಒದಗಿಸುವದು ಉತ್ತಮ ಸಂಶೋಧನಾ ಪ್ರೌಢ ಪ್ರಬಂಧ ಮಂಡಿಸಿದ ರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿಯನ್ನು ನೀಡಲಾಗುವುದು ಎಂದು ಒಪ್ಪಂದ ಉದ್ದೇಶವನ್ನು ವಿವರಿಸಿದರು.

ಕವಿವಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ ಮಾತನಾಡಿ...ಪ್ರಸ್ತುತ ಸಂಶೋಧನೆಗೆ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿ ಉತ್ತೇಜನ ನೀಡಲು ಶಿಷ್ಯವೇತನ ಹಾಗೂ ಶೈಕ್ಷಣಿಕ ವಲಯವನ್ನು ಬಲಗೊಳಿಸಲು ಸಂಘ, ಸಂಸ್ಥೆ, ಉದ್ಯಮ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಹಕಾರ ಇಂದಿನ ಅಗತ್ಯವಾಗಿದೆ ಆದ್ದರಿಂದ ಹಳೆಯ ವಿದ್ಯಾರ್ಥಿ ಸಂಘವು ವಿಶ್ವವಿದ್ಯಾಲಯದ ಜೊತೆಗೆ ಕೈ ಜೊಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ.ಎಂ.ಆರ್.ಗೊರಬಾಳ ಅಧ್ಯಕ್ಷರಾದ ರಮೇಶ್ ಗೋರಬಾಳ, ಫೌಂಡೇಶನ್ ಕಾರ್ಯದರ್ಶಿ ಡಿ.ಎಸ್.ಪಾಟೀಲ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ, ಪ್ರಾಧ್ಯಾಪಕರಾದ ಪ್ರೊ.ಆರ್.ಬಿ.ಚೌಗಲೆ, ಪ್ರೊ.ಎಲ್.ಎ.ಶಾಸ್ತ್ರಿ, ಪ್ರೊ.ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕರಾದ ಡಾ.ಆರ್.ಎಫ್ ಭಜಂತ್ರಿ ಇದ್ದರು.

New Delhi RNI Reg.No.51768
Postal : PMG/KA/NK/BM/124/2023-25
ಭಾರತ ವೈಭವ
BHARAT VAIBHAV DAILY
दैनिक भारत वैभव
ಕನ್ನಡ ದಿನಪತ್ರಿಕೆ
BV 5 NEWS
bvdaily2013@gmail.com
Address: #4629/C, Badakal Galli, Near ZP Office, BELAGAVI-590001, Karnataka state. Mobile No: 9019229369, 0831-4202818

bv 27.4.2025 (8 )-4
27 Apr 2025

POWERED BY. KHUSHI HOST ®
WEB DESIGN AND DEVELOPMENT

# ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿ ಕೈಜೋಡಿಸುವ ತುರ್ತು ಅಗತ್ಯ

ಭಾರತ ವೈಭವ ಸುದ್ದಿ

**ಧಾರವಾಡ:** ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಜೊತೆಗೆ ಖಾಸಗಿ ಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವ ಇಂದಿನ ತುರ್ತು ಅಗತ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಶ್ರೀ. ಎಸ್ ಅಭಿಪ್ರಾಯಪಟ್ಟರು.

ಅವರು ಶನಿವಾರದಂದು ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ ವಿದ್ಯಾರ್ಥಿಗಳಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗ ಮತ್ತು ಬೆಂಗಳೂರಿನ ಡಾ.ಎಂ. ಆರ್.ಗೋರಬಾಳ್ ಫೌಂಡೇಶನ್ ಜೊತೆಗೆ ಒಪ್ಪಂದ (ಒಂಗ) ಮಾಡಿಕೊಂಡು ಮಾತನಾಡಿದರು.




ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ ಎಂದ ಅವರು ಪ್ರಸ್ತುತ ಕಾರ್ಪೊರೇಟ್ ಸಂಸ್ಥೆ, ಉದ್ಯಮ ಮತ್ತು ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜೊತೆಗೆ ಸಹಾಯ ಸಹಕಾರ ಇಂದಿನ ಅಗತ್ಯವಾಗಿದ್ದು, ಸಂಘ ಸಂಸ್ಥೆಗಳು, ಉದ್ಯಮಿಗಳು, ಮತ್ತು ಸಂಘ ಸಂಸ್ಥೆಗಳು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶ ಹೊಂದಿದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಎ.ಚೆನ್ನಪ್ಪ ಮಾತನಾಡಿ...ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಸಂಘ ಸಂಸ್ಥೆಗಳು ಮುಂದೆ ಬರಬೇಕಾದ ಅವಶ್ಯಕತೆ ಇದೆ. ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಎಂಬ ಯೋಜನೆ ಅಡಿಯಲ್ಲಿ ಉದ್ಯಮಿಗಳು. ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಜೊತೆಗೆ ಕೈ ಜೋಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ.ಎಂ.ಆರ್ ಗೋರಬಾಳ ಫೌಂಡೇಶನ್ ಅಧ್ಯಕ್ಷರಾದ ರಮೇಶ್ ಗೋರಬಾಳ ಮಾತನಾಡಿ ನನ್ನ ತಂದೆ ಎಂ.ಆರ್.ಗೋರಬಾಳ ಅವರು ಈ ವಿಶ್ವವಿದ್ಯಾಲಯದಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ ಅವರು ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಕಲಿತ ಮತ್ತು ಸೇವೆ ಸಲ್ಲಿಸಿದ ನನ್ನ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬುದು ಅವರ ಉದ್ದೇಶದಿಂದ ಡಾ.ಎಂ.ಆರ್. ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು, ಅಂತರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಧನಸಹಾಯ ಒದಗಿಸುವದು

ಉತ್ತಮ ಸಂಶೋಧನಾ ಪ್ರೌಢ ಪ್ರಬಂಧ ಮಂಡಿಸಿದ ರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿಯನ್ನು ನೀಡಲಾಗುವುದು ಎಂದು ಒಪ್ಪಂದ ಉದ್ದೇಶವನ್ನು ವಿವರಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ ಮಾತನಾಡಿ...ಪ್ರಸ್ತುತ ಸಂಶೋಧನೆಗೆ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿ ಉತ್ತೇಜನ ನೀಡಲು ಶಿಷ್ಯವೇತನ ಹಾಗೂ ಶೈಕ್ಷಣಿಕ ವಲಯವನ್ನು ಬಲಗೊಳಿಸಲು ಸಂಘ, ಸಂಸ್ಥೆ, ಉದ್ಯಮ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಹಕಾರ ಇಂದಿನ ಅಗತ್ಯವಾಗಿದೆ ಆದ್ದರಿಂದ ಹಳೆಯ ವಿದ್ಯಾರ್ಥಿ ಸಂಘವು ವಿಶ್ವವಿದ್ಯಾಲಯದ ಜೊತೆಗೆ ಕೈ ಜೊಡಿಸುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ.ಎಂ.ಆರ್.ಗೊರಬಾಳ ಅಧ್ಯಕ್ಷರಾದ ರಮೇಶ್ ಗೋರಬಾಳ, ಫೌಂಡೇಶನ್ ಕಾರ್ಯದರ್ಶಿ ಡಿ.ಎಸ್.ಪಾಟೀಲ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ, ಪ್ರಾಧ್ಯಾಪಕರಾದ ಪ್ರೊ.ಆರ್.ಬಿ.ಚೌಗಲೆ, ಪ್ರೊ.ಎಲ್.ಎ.ಶಾಸ್ತ್ರಿ, ಪ್ರೊ.ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕರಾದ ಡಾ.ಆರ್.ಎಫ್ ಭಜಂತ್ರಿ ಇದ್ದರು.




# ಶೈಕ್ಷಣಿಕ ಚಟುವಟಿಕೆಗೆ ಕಾರ್ಪೋರೇಟ್ ಕಂಪೆನಿಗಳು ಕೈಜೋಡಿಸಲಿ

**ಸಾಗರ ಸಾಮ್ರಾಟ ಸಮಾಚಾರ**

**ಧಾರವಾಡ:** ಬದಲಾದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಜೊತೆಗೆ ಖಾಸಗಿ ಸಂಸ್ಥೆಗಳು, ಉದ್ಯಮಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಜೋಡಿಸುವ ಇಂದಿನ ತುರ್ತು ಅಗತ್ಯವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಶ್ರೀ. ಎಸ್ ಅಭಿಪ್ರಾಯಪಟ್ಟರು.

ಅವರು ಶನಿವಾರದಂದು ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗ ಮತ್ತು ಬೆಂಗಳೂರಿನ ಡಾ.ಎಂ.ಆರ್. ಗೋರಬಾಳ್ ಫೌಂಡೇಶನ್ ಜೊತೆಗೆ ಒಪ್ಪಂದ (MoU) ಮಾಡಿಕೊಂಡು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆ, ಅನ್ವೇಷಣೆಗೆ ಪೂರಕವಾಗಿ ಉತ್ತೇಜನ ನೀಡಲು ಶಿಷ್ಯವೇತನ ಹೆಚ್ಚು ಮಹತ್ವ ಪಡೆದಿದೆ ಎಂದ ಅವರು ಪ್ರಸ್ತುತ ಕಾರ್ಪೊರೇಟ್ ಸಂಸ್ಥೆ, ಉದ್ಯಮ ಮತ್ತು ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳ ಜೊತೆಗೆ ಸಹಾಯ ಸಹಕಾರ ಇಂದಿನ ಅಗತ್ಯವಾಗಿದ್ದು, ಸಂಘ ಸಂಸ್ಥೆಗಳು, ಉದ್ಯಮಿಗಳು, ಮತ್ತು ಸಂಘ ಸಂಸ್ಥೆಗಳು ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶ ಹೊಂದಿದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಎ.ಚೆನ್ನಪ್ಪ ಮಾತನಾಡಿ, ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಇಂದು ಸಂಘ ಸಂಸ್ಥೆಗಳು ಮುಂದೆ ಬರಬೇಕಾದ ಅವಶ್ಯಕತೆ ಇದೆ. ಸಮಾಜದ ಬಲವರ್ಧನೆಗೆ ಮತ್ತು ಶಿಕ್ಷಣ ಸಂಸ್ಥೆಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಎಂಬ ಯೋಜನೆ ಅಡಿಯಲ್ಲಿ ಉದ್ಯಮಿಗಳು. ಕಾರ್ಪೊರೇಟ್ ಕಂಪನಿಗಳು ಮತ್ತು ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಜೊತೆಗೆ ಕೈ ಜೋಡಿಸುವ ಅವಶ್ಯಕತೆ ಇದೆ ಎಂದರು.

ಬೆಂಗಳೂರಿನ ಡಾ.ಎಂ.ಆರ್ ಗೋರಬಾಳ ಫೌಂಡೇಶನ್ ಅಧ್ಯಕ್ಷರಾದ ರಮೇಶ್ ಗೋರಬಾಳ ಮಾತನಾಡಿ ನನ್ನ ತಂದೆ ಎಂ.ಆರ್. ಗೋರಬಾಳ ಅವರು ಈ ವಿಶ್ವವಿದ್ಯಾಲಯದಲ್ಲಿ ಕಲಿತು ಇಲ್ಲಿಯೇ ಸೇವೆ ಮಾಡಿದ ಅವರು ಕರ್ನಾಟಕ ವಿಶ್ವವಿದ್ಯಾಲಯದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಕಲಿತ ಮತ್ತು ಸೇವೆ ಸಲ್ಲಿಸಿದ ನನ್ನ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬುದು ಅವರ ಉದ್ದೇಶದಿಂದ ಡಾ.ಎಂ.ಆರ್. ಗೋರಬಾಳ ಫೌಂಡೇಶನ್ ವತಿಯಿಂದ ಸಂಶೋಧನಾ ನಿರತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು, ಅಂತರಾಷ್ಟ್ರೀಯ ಉಪನ್ಯಾಸ ಆಯೋಜಿಸಲು ಧನಸಹಾಯ ಒದಗಿಸುವದು

ಉತ್ತಮ ಸಂಶೋಧನಾ ಪ್ರೌಢ ಪ್ರಬಂಧ ಮಂಡಿಸಿದ ರಸಾಯನಶಾಸ್ತ್ರದ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗೆ ನಗದು ಪ್ರಶಸ್ತಿಯನ್ನು ನೀಡಲಾಗುವುದು ಎಂದು ಒಪ್ಪಂದ ಉದ್ದೇಶವನ್ನು ವಿವರಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ ಮಾತನಾಡಿ ಪ್ರಸ್ತುತ ಸಂಶೋಧನೆಗೆ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿ ಉತ್ತೇಜನ ನೀಡಲು ಶಿಷ್ಯವೇತನ ಹಾಗೂ ಶೈಕ್ಷಣಿಕ ವಲಯವನ್ನು ಬಲಗೊಳಿಸಲು ಸಂಘ, ಸಂಸ್ಥೆ, ಉದ್ಯಮ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಹಕಾರ ಇಂದಿನ ಅಗತ್ಯವಾಗಿದೆ ಆದ್ದರಿಂದ ಹಳೆಯ ವಿದ್ಯಾರ್ಥಿ ಸಂಘವು ವಿಶ್ವವಿದ್ಯಾಲಯದ ಜೊತೆಗೆ ಕೈ ಜೊಡಿಸುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ.ಎಂ. ಆರ್.ಗೊರಬಾಳ ಅಧ್ಯಕ್ಷ ರಮೇಶ್ ಗೋರಬಾಳ, ಫೌಂಡೇಶನ್ ಕಾರ್ಯದರ್ಶಿ ಡಿ.ಎಸ್.ಪಾಟೀಲ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ರವೀಂದ್ರ ಕಾಂಬಳೆ, ಪ್ರಾಧ್ಯಾಪಕರಾದ ಪ್ರೊ.ಆರ್.ಬಿ.ಚೌಗಲೆ, ಪ್ರೊ.ಎಲ್.ಎ.ಶಾಸ್ತ್ರಿ, ಪ್ರೊ.ಸುಜಾತಾ, ಕವಿವಿ ಯೋಜನೆ ನಿರ್ವಹಣೆ ವಿಭಾಗದ ನಿರ್ದೇಶಕರಾದ ಡಾ.ಆರ್.ಎಫ್ ಭಜಂತ್ರಿ ಇದ್ದರು.